# ಸುಮನ್ ನವನವೀನ

**ರಘು**

ನಟಿಯರಲ್ಲಿ ಎರಡು ಬಗೆಯವರಿರುತ್ತಾರೆ: ಒಬ್ಬರು ಸೌಂದರ್ಯವನ್ನು ನೆಚ್ಚಿಕೊಂಡವರು. ಮತ್ತೊಬ್ಬರು ಪ್ರತಿಭೆಯನ್ನು ನೆಚ್ಚಿಕೊಂಡವರು. ಸೌಂದರ್ಯ ಮತ್ತು ಪ್ರತಿಭೆ ಎರಡನ್ನೂ ಹೊಂದಿರುವ ಮೂರನೆಯ ವರ್ಗದ ಅಪರೂಪದ ಕಲಾವಿದೆಯರೂ ಇದ್ದಾರೆ. ಅಂಥ ವಿಶಿಷ್ಟ ಕಲಾವಿದೆಯರ ಸಾಲಿನಲ್ಲಿ ಗುರ್ತಿಸಬಹುದಾದ ಕಲಾವಿದೆ ಸುಮನ್ ರಂಗನಾಥ್.

ಚಿತ್ರರಂಗಕ್ಕೆ ಆಗಮಿಸಿದ ಆರಂಭದ ದಿನಗಳಲ್ಲಿ ಗ್ಲ್ಯಾಮರ್‌ನಿಂದ ಗಮನಸೆಳೆದಿದ್ದ ಸುಮನ್ ನಂತರದ ವರ್ಷಗಳಲ್ಲಿ ಕಲಾವಿದೆಯಾಗಿ ರೂಪುಗೊಂಡ ಬಗೆ ಅಚ್ಚರಿ ಹುಟ್ಟಿಸುವಂತಹದ್ದು. 'ಸಂತ ಶಿಶುನಾಳ ಶರೀಫ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪ್ರವೇಶಿಸಿದ ಅವರು ನಂತರದಲ್ಲಿ ನಟಿಸಿದ್ದೆಲ್ಲ ಬೆಡಗಿನ ಹೆಣ್ಣಾಗಿಯೇ. 'ಡಾಕ್ಟರ್ ಕೃಷ್ಣ', 'ಸಿಬಿಐ ಶಂಕರ್', 'ಕಾಡಿನ ವೀರ', 'ನಮ್ಮೂರ ಹಮ್ಮೀರ', 'ಕೆಂಪು ಸೂರ್ಯ' – ಎಲ್ಲ ಸಿನಿಮಾಗಳಲ್ಲೂ ಸುಮನ್ ಬಳುಕುವ ಬಳ್ಳಿಯಾಗಿಯಷ್ಟೇ ಗಮನಸೆಳೆದಿದ್ದರು.

> ಓರಗೆಯ ನಟಿಯರೆಲ್ಲ ಅಮ್ಮನ ಪಾತ್ರಗಳಲ್ಲಿ ಸೆಟ್ಲ್ ಆಗಿರುವಾಗ, ಸುಮನ್ ರಂಗನಾಥ್ ಬಳುಕುವ ಬಳ್ಳಿಯಾಗಿಯೇ ಚಾಲ್ತಿಯಲ್ಲಿದ್ದಾರೆ. ಅವರ ನಟನೆಯ 'ಡಬಲ್ ಎಂಜಿನ್' ಚಿತ್ರಮಂದಿರಗಳ ಹೊಸ್ತಿಲಲ್ಲಿದೆ.

ಸೌಂದರ್ಯವನ್ನು ಮೀರಿ ಸುಮನ್ ರಂಗನಾಥ್‌ರೊಳಗಿನ ಕಲಾವಿದೆ ಕನ್ನಡ ಚಿತ್ರರಸಿಕರ ಕಣ್ಣಿಗೆ ಕಾಣಿಸಿದ್ದು ವಿಜಯ್ ಪ್ರಸಾದ್ ಚಿತ್ರಗಳ ಮೂಲಕ. 'ಸಿದ್ಲಿಂಗು' ಹಾಗೂ 'ನೀರ್ ದೋಸೆ' ಚಿತ್ರಗಳಲ್ಲಿನ ಅವರ ಪಾತ್ರಗಳು ಗ್ಲಾಮರಸ್ ಆಗಿದ್ದರೂ, ಚಿತ್ರಮಂದಿರದ ಆಚೆಗೂ ಅವರು ಸಹೃದಯರ ಮನಸ್ಸಿನಲ್ಲಿ ಉಳಿದಿದ್ದು ಅಭಿನಯದ ಮೂಲಕವೇ.

ಸುಮನ್ ನಟನೆಯ ಹೊಸ ಸಿನಿಮಾ 'ಡಬಲ್ ಎಂಜಿನ್'. ಈ ಚಿತ್ರದಲ್ಲಿ ಕೂಡ ಅವರದು ಗ್ಲಾಮರಸ್ ಪಾತ್ರ. ಅವರ ಓರಗೆಯ ಅನೇಕ ನಟಿಯರು ಚಿತ್ರರಂಗದಿಂದ ದೂರವಾಗಿಯೋ ಇಲ್ಲವೇ ಅಮ್ಮನ ಪಾತ್ರಗಳಲ್ಲಿ ನಟಿಸುತ್ತಲೋ ಇರುವಾಗ, ಸುಮನ್ ಈಗಲೂ ತಮ್ಮ ಪ್ರಖರ ಸೌಂದರ್ಯದಿಂದ ನೋಡುಗರ ಮನಸೆಳೆಯುತ್ತಿದ್ದಾರೆ.

ಜುಲೈ 13ರಂದು ತೆರೆಕಾಣುತ್ತಿರುವ 'ಡಬಲ್ ಎಂಜಿನ್'ನಲ್ಲಿ ಕೂಡ ಅವರು ಬಿಂಕದ ಸಿಂಗಾರಿ. ಹಾಸ್ಯಪ್ರಧಾನದ ಜೊತೆಗೆ ಶೃಂಗಾರಪ್ರಧಾನವೂ ಆಗಿರುವಂತೆ ಕಾಣಿಸುವ ಈ ಚಿತ್ರದ ನಿರ್ದೇಶನ ಚಂದ್ರಮೋಹನ್ ಅವರದು. ಈ ಮೊದಲು 'ಬಾಂಬೆ ಮಿಠಾಯಿ' ನಿರ್ದೇಶಿಸಿದ್ದ ಅವರು, ಈಗ 'ಡಬಲ್ ಎಂಜಿನ್' ರೂಪಿಸಿದ್ದಾರೆ.

ಶ್ರೀಮಂತಿಕೆಯ ಬೆನ್ನುಹತ್ತಿದ ಮೂವರು ಮುಗ್ಧ ಹುಡುಗರ ಕಥೆ ಚಿತ್ರದಲ್ಲಿದೆಯಂತೆ. ಅತಿ ಆಸೆ ಎಂದಮೇಲೆ 'ಗತಿ ಕೇಡು' ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲವಷ್ಟೆ. ಗೆಳೆಯರ ತುಂಟಾಟ ಹಾಗೂ ಸಂಕಟದ ಕಥೆಯ ಚಿತ್ರ ಯುವಜನಕ್ಕೆ ಇಷ್ಟವಾಗಲಿದೆ ಎನ್ನುವ ನಂಬಿಕೆ ನಿರ್ದೇಶಕರದು.

ದತ್ತಣ್ಣ ಹಾಗೂ ಚಿಕ್ಕಣ್ಣ ತಾರಾಗಣದಲ್ಲಿರುವ ಹಳೆ ಬೇರು ಹೊಸ ಚಿಗುರು. ಇವರೊಂದಿಗೆ ಸಾಧು ಕೋಕಿಲ, ಸುಚೇಂದ್ರ ಪ್ರಸಾದ್, ಪ್ರಭು, ಪ್ರಿಯಾಂಕ ಮಲ್ನಾಡ್ ಮುಂತಾದವರು ತಾರಾಗಣದಲ್ಲಿ ಇದ್ದಾರೆ. ಚಿತ್ರದ ಸಂಗೀತ ಸಂಯೋಜನೆ ವೀರ್ ಸಮರ್ಥ್ ಅವರದು. ■



